# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಂಖ್ಯೆ:ಬೃ.ಬೆ.ಮ.ಪಾ/ಸಕಾಅ/ಬೊಉ/ಪಿಆರ್/ /2021-22

ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರ ಕಛೇರಿ
ಬೊಮ್ಮನಹಳ್ಳಿ ಉಪವಿಭಾಗ
ಕೋಡಿಚಿಕ್ಕನಹಳ್ಳಿ ಮುಖ್ಯರಸ್ತೆ, ಬಿಳೇಕಹಳ್ಳಿ
ಬೆಂಗಳೂರು-560076. ದಿನಾಂಕ: 10/12/2021

## ದಿನಾಂಕ: 10.12.2021 ರಂದು ನಡೆದ ಸಭಾ ನಡವಳಿಗಳು

ವಾರ್ಡ್ ಸಮಿತಿಯ ಹಾಜರಿದ್ದವರು

1. ಶ್ರೀ ಎಸ್.ಇ ಶ್ರೀನಿವಾಸ್ – ಅಧ್ಯಕ್ಷರು ಹಾಗೂ ನೋಡಲ್ ಅಧಿಕಾರಿಗಳು.
2. ಶ್ರೀ ಕೆ.ಪಿ ಉಮೇಶ್ – ಕಾರ್ಯದರ್ಶಿಗಳು ಹಾಗೂ ಸಹಾಯಕ ಅಭಿಯಂತರರು ವಾರ್ಡ್-175.
3. ಶ್ರೀ ಹೆಚ್ ನರಸಪ್ಪ – ತೋಟಗಾರಿಕೆ ಇಲಾಖೆ.
4. ಶ್ರೀ ಮುತ್ತುರಾಜ್ – ಪರಿವೀಕ್ಷಕರು (BWSSB).
5. ಶ್ರೀ/ಶ್ರೀಮತಿ ಶುಶ್ಮ ಎಂ.ಎಸ್ – ಕಿರಿಯ ಆರೋಗ್ಯ ಪರಿವೀಕ್ಷಕರು.
6. ಶ್ರೀ ಪ್ರವೀನ್ – ಕಿರಿಯ ಅಭಿಯಂತರರು (BESCOM).
7. ಶ್ರೀ ಮಹೇಶ್ ಕುಮಾರ್ ಎಸ್ – ಕಿರಿಯ ಅಭಿಯಂತರರು (BESCOM).
8. ಶ್ರೀ/ಶ್ರೀಮತಿ ಕಲ್ಪನ – ಹಿರಿಯ ಆರೋಗ್ಯ ಪರಿವೀಕ್ಷಕರು.
9. ಶ್ರೀ/ಶ್ರೀಮತಿ ನೀಲಮ್ಮ – ಆರೋಗ್ಯ ಇಲಾಖೆ.
10. ನಾರಾಯಣ – ಕಿರಿಯ ಅಭಿಯಂತರರು (BESCOM).

ವಾರ್ಡ್ ಸಮಿತಿ ಅಧ್ಯಕ್ಷರು ಹಾಗೂ ನೋಡಲ್ ಅಧಿಕಾರಿಗಳಾದ ಶ್ರೀ ಎಸ್.ಇ ಶ್ರೀನಿವಾಸ್ ಸಹಾಯಕ ಕಾರ್ಯಪಾಲಕ ಅಭಿಯಂತರರು ಹಾಗೂ ಶ್ರೀ ಕೆ.ಪಿ ಉಮೇಶ್ ಸಹಾಯಕ ಅಭಿಯಂತರರು ಹಾಗೂ ಸಮಿತಿ ಕಾರ್ಯದರ್ಶಿಗಳು ಸಭೆಗೆ ಆಗಮಿಸಿದ ಎಲ್ಲಾರಿಗೂ ಸ್ವಗತ ಕೋರಿ ಸಭೆಯನ್ನು ಪ್ರಾರಂಭಿಸಲಾಯಿತು ಹಾಗೂ ಅಧ್ಯಕ್ಷರವರನ್ನು ವಾರ್ಡ್ ಸಭೆಯ ಕುಂದುಕೊರತೆಗಳ ಬಗ್ಗೆ ಸವಿಸ್ಥಾರವಾಗಿ ಪ್ರಸ್ಥಾಪಿಸಲು ಕೋರಲಾಯಿತು.

ಅಧ್ಯಕ್ಷರು ಹಾಗೂ ನೋಡಲ್ ಅಧಿಕಾರಿಗಳು ವಾರ್ಡ್ 175ರ ವ್ಯಾಪ್ತಿಯಲ್ಲಿ ಬರುವ ಘನತ್ಯಾಜ್ಯ, ರಸ್ತೆಗಳ ಗುಂಡಿ ಮುಂಚ್ಚುವ, ಬೀಧಿ ದೀಪ ನಿರ್ವಹಣೆ ಹಾಗೂ ಇತರೆ ಸಂಬಂಧಿಸಿದ ವಿಷಯಗಳ ಬಗ್ಗೆ ಚರ್ಚಿಸಲು ಸದಸ್ಯರು ಹಾಗೂ ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳಿಗೆ ಸೂಚಿಸಿದರು.

1. ಬೆಸ್ಕಾಂ ಇಲಾಖೆ:-

ಸಭೆಗೆ ಹಾಜರಿದ್ದ ಅಧಿಕಾರಿ ಪಗರವೀನ್ ರವರನ್ನು ಬೋರ್‌ವೆಲ್‌ಗಳ ಬಗ್ಗೆ ಮಾಹಿತಿ ಕೇಳಲಾಗಿ ಚಾಲ್ತಿಯಲ್ಲಿರುವ ಬೋರ್‌ವೆಲ್‌ಗಳಿಗೆ ಆರ್.ಆರ್ ಬಿಲ್ ಕೊಡುತ್ತಿದ್ದು ಚಾಲ್ತಿಯಲ್ಲಿಲ್ಲದಿರುವ ಬೋರ್‌ವೆಲ್‌ಗಳಿಗೆ ಆರ್.ಆರ್ ಬಿಲ್ ಕೊಡುತ್ತಿಲ್ಲ ಮತ್ತು Over Hanging Cables ಗಳನ್ನು ವಿಧ್ಯುತ್ ಕಂಬಗಳಿಗೆ ಅಳವಡಿಸಬಾರದೆಂದು ಅಧಿಕಾರಿಗೆ ಸೂಚಿಸಲಾಯಿತು ಮತ್ತೊಮ್ಮೆ ಬೋರ್‌ವೆಲ್‌ಗಳ ಚಾಲ್ತಿಯಲ್ಲಿರುವ ಹಾಗೂ ಚಾಲ್ತಿಯಲ್ಲಿಲ್ಲದಿರುವ ಬೋರ್‌ವೆಲ್‌ಗಳನ್ನು ಸರ್ವೆ ಮಾಡಿ ಮುಂದಿನ ವಾರ್ಡ್ ಸಮಿತಿಯಲ್ಲಿ ತಿಳಿಸುವುದಾಗಿ ಸಭೆಯಲ್ಲಿ ತಿಳಿಸಿದರು.

2. ಇಂಜಿನಿಯರಿಂಗ್ ಇಲಾಖೆ:-

ಈ ವಿಷಯವಾಗಿ ಕಾಮಗಾರಿಗಳ ಬಗ್ಗೆ ಸಂಬಂಧಿಸಿದಂತೆ ಶ್ರೀ ಕೆ.ಪಿ ಉಮೇಶ್, ಕಾರ್ಯದರ್ಶಿಗಳು ಹಾಗೂ ಸಹಾಯಕ ಅಭಿಯಂತರರು ವಾರ್ಡ್-175 ರವರು ಹಾಜರಿದ್ದರು ಈ ಹಿಂದೆ ಚರ್ಚಿಸಲಾದ ರಸ್ತೆ ಗುಂಡಿ ನಿರ್ವಹಣೆ ಮತ್ತು ಚರಂಡಿಗಳಲ್ಲಿ ಹೂಳು ತೆಗೆಯುವ ಕಾಮಗಾರಿ ಹಾಗೂ ಚರಂಡಿಗಳ ಮೇಲೆ ಕವರಿಂಗ್ ಸ್ಲಾಬ್‌ಗಳನ್ನು ಅಳವಡಿಸಲು ಸಭೆಯಲ್ಲಿ ಚರ್ಚಿಸಲಾಯಿತು, ಈ ಹಿಂದೆ ಸಭೆಯಲ್ಲಿ ಚರ್ಚಿಸಲಾದ ಕಾಮಗಾರಿಗಳ ಬಗ್ಗೆ ಸದರಿ ಅಭಿಯಂತರರು ವರದಿ ಮಾಡುತ್ತಾ ಉಳಿಕೆ ಇರುವ ಹಾಗೂ ಕಾರ್ಯದೇಶ ಆಗಿರುವ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲು ಸಭೆಯಲ್ಲಿ ಗಮನ ಸೆಳೆಯಲಾಯಿತು ತ್ವರಿತವಾಗಿ ಕಾಮಗಾರಿಗಳನ್ನು ಕೈಗೊಳ್ಳಲಾಗುವುದೆಂದು ಸಭೆಯಲ್ಲಿ ತಿಳಿಸಿದರು.

Scanned with CamScanner

3. ತೋಟಗಾರಿಕೆ ಇಲಾಖೆ:-

ಈ ವಿಷಯವಾಗಿ ಒಟ್ಟು 8 ಪಾರ್ಕ್‌ಗಳಿದ್ದು ರಾತ್ರಿವೇಳೆಯಲ್ಲಿ ವಿದುತ್ ದೀಪಗಳ ವ್ಯವಸ್ಥೆಯಿದ್ದು ಕುಡಿಯುವ ನೀರಿನ ವ್ಯವಸ್ಥೆಯು ಇದ್ದು ಸಾರ್ವಜನಿಕರಿಗೆ ಯಾವುದೇ ತೊಂದರೆ ಇಲ್ಲವೆಂದು ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳು ತಿಳಿಸಿದರು.

4. ಬೀದಿ ದೀಪ ನಿರ್ವಹಣೆ:-

ಈ ವಿಷಯವಾಗಿ ಬೀದಿ ದೀಪ ನಿರ್ವಹಣೆಗೆ ಸಂಬಂಧಿಸಿದಂತೆ ಸಭೆಯಲ್ಲಿ ಹಾಜರಿದ್ದ ಸಾರ್ವಜನಿಕರು ವಿರಾಟ್‌ನಗರದಲ್ಲಿ ಬೀದಿ ದೀಪಗಳನ್ನು ಅಳವಡಿಸಲು ಸಭೆಯಲ್ಲಿ ತಿಳಿಸಿದರು.

5. ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಇಲಾಖೆ:-

ಈ ವಿಷಯವಾಗಿ ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿಗೆ ಸಂಬಂಧಿಸಿದಂತೆ ಮ್ಯಾನ್‌ಹೋಲ್‌ಗಳ ಜೆಟ್ಟಿಂಗ್ ಮಷೀನ್ ಸ್ಥಳಕ್ಕೆ ಬರುತ್ತಿಲ್ಲವೆಂದು ಸಾರ್ವಜನಿಕರು ತಿಳಿಸಿದರು ಸದರಿ ವಾರ್ಡ್‌ನ ವಿರಾಟ್‌ನಗರದ 5ನೇ ಮುಖ್ಯರಸ್ತೆಯಲ್ಲಿ ಬೋರ್‌ವೆಲ್ ಅವಶ್ಯಕತೆ ಇದೆ ಎಂದು ತಿಳಿಸಿದಾಗ ನೋಡಲ್ ಅಧಿಕಾರಿಯವರು ಸಭೆಯಲ್ಲಿ ಕ್ರಮವಹಿಸುವಂತೆ ಶ್ರೀ ಮುತ್ತುರಾಜ್ ವಾಟರ್ ಇನ್ಸ್‌ಪೆಕ್ಟರ್ ರವರಿಗೆ ಸೂಚಿಸಿದರು.

ಮುಂದುವರೆದಂತೆ, ಕೊನೆಯಲ್ಲಿ ಅಧ್ಯಕ್ಷರು ಹಾಗೂ ನೋಡಲ್ ಅಧಿಕಾರಿಗಳ ಅನುಮತಿ ಮೇರೆಗೆ ಸದಸ್ಯ ಕಾರ್ಯದರ್ಶಿಗಳಾದ ಹಾಗೂ ಸಹಾಯಕ ಅಭಿಯಂತರರಾದ ಶ್ರೀ ಕೆ.ಪಿ ಉಮೇಶ್ ರವರು ಎಲ್ಲಾರಿಗೂ ವಂದಿಸಿ, ಸಭೆ ಮುಕ್ತಾಯಗೊಳಿಸಿದರು.
ಅಧ್ಯಕ್ಷರು ಹಾಗೂ ನೋಡಲ್ ಅಧಿಕಾರಿ ಆದೇಶದ ಮೇರೆಗೆ.

ಸಹಿ/-
ಕಾರ್ಯದರ್ಶಿಗಳು ಹಾಗೂ ಸಹಾಯಕ ಅಭಿಯಂತರರು
ವಾರ್ಡ್ ನಂ. 175, ಬೊಮ್ಮನಹಳ್ಳಿ

ಸಹಿ/-
ಅಧ್ಯಕ್ಷರು ಹಾಗೂ ನೋಡಲ್ ಅಧಿಕಾರಿಗಳು
ವಾರ್ಡ್ ನಂ. 175, ಬೊಮ್ಮನಹಳ್ಳಿ

*ಪ್ರತಿಯನ್ನು:*

1. *ಮಾನ್ಯ ಜಂಟಿ ಆಯುಕ್ತರು (ಬೊಮ್ಮನಹಳ್ಳಿ) ಬಿಬಿಎಂಪಿ ರವರಿಗೆ ಸಲ್ಲಿಸಲಾಗಿದೆ.*
2. *ವಾರ್ಡ್ ಸಮಿತಿಯ ಅಧ್ಯಕ್ಷರ ರವರಿಗೆ ಸಲ್ಲಿಸಲಾಗಿದೆ.*
3. *ವಾರ್ಡ್ ಸಮಿತಿಯ ಸದಸ್ಯರುಗಳ ರವರಿಗೆ ಸಲ್ಲಿಸಲಾಗಿದೆ.*
4. *ಮುಖ್ಯ ಅಭಿಯಂತರರು, ಬೊಮ್ಮನಹಳ್ಳಿ ವಲಯ, ರವರಿಗೆ ಸಲ್ಲಿಸಲಾಗಿದೆ.*
5. *ಕಾರ್ಯಪಾಲಕ ಅಭಿಯಂತರರು, ಬೊಮ್ಮನಹಳ್ಳಿ ವಿಭಾಗ, ರವರಿಗೆ ಸಲ್ಲಿಸಲಾಗಿದೆ.*
6. *ಅಧ್ಯಕ್ಷರು ಹಾಗೂ ನೋಡಲ್ ಅಧಿಕಾರಿಗಳು ವಾರ್ಡ್-175 ಬೊಮ್ಮನಹಳ್ಳಿ ರವರಿಗೆ ಸಲ್ಲಿಸಲಾಗಿದೆ.*
7. *ಅಧೀಕ್ಷಕರು ತೋಟಗಾರಿಕೆ ಇಲಾಖೆ, ಬೊಮ್ಮನಹಳ್ಳಿ ರವರಿಗೆ ಸಲ್ಲಿಸಲಾಗಿದೆ.*
8. *ಠಾಣಾಧಿಕಾರಿಗಳು ಬೊಮ್ಮನಹಳ್ಳಿ ಪೋಲೀಸ್ ಠಾಣೆ ರವರ ರವರಿಗೆ ಸಲ್ಲಿಸಲಾಗಿದೆ.*
9. *ಸಹಾಯಕ ಕಾರ್ಯಪಾಲಕ ಅಭಿಯಂತರರು, ಘನತ್ಯಾಜ್ಯ ನಿರ್ವಹಣೆ ರವರಿಗೆ ಸಲ್ಲಿಸಲಾಗಿದೆ.*
10. *ಸಹಾಯಕ ಕಾರ್ಯಪಾಲಕ ಅಭಿಯಂತರರು, ಬೆಸ್ಕಾಂ ರವರಿಗೆ ಸಲ್ಲಿಸಲಾಗಿದೆ.*
11. *ಸಹಾಯಕ ಕಾರ್ಯಪಾಲಕ ಅಭಿಯಂತರರು, ವಿದ್ಯುತ್ ವಿಭಾಗ, ಬೊಮ್ಮನಹಳ್ಳಿ ರವರಿಗೆ ಸಲ್ಲಿಸಲಾಗಿದೆ.*
12. *ಸಹಾಯಕ ಕಾರ್ಯಪಾಲಕ ಅಭಿಯಂತರರು, ಒಳಚರಂಡಿ ಮತ್ತು ನೀರು ಸರಬರಾಜು ರವರಿಗೆ ಸಲ್ಲಿಸಲಾಗಿದೆ.*
13. *ಸಹಾಯಕ ಕಾರ್ಯಪಾಲಕ ಅಭಿಯಂತರರು, ರಸ್ತೆ ಮೂಲಭೂತ ಸೌಕರ್ಯ ರವರಿಗೆ ಸಲ್ಲಿಸಲಾಗಿದೆ.*
14. *ಸಹಾಯಕ ಕಾರ್ಯಪಾಲಕ ಅಭಿಯಂತರರು, ಬೃಹತ್ ನೀರುಗಾಲುವೆ ಉಪ-ವಿಭಾಗ ರವರಿಗೆ ಸಲ್ಲಿಸಲಾಗಿದೆ.*
15. *ವಲಯ ಅರಣ್ಯಾಧಿಕಾರಿಗಳು ಬೊಮ್ಮನಹಳ್ಳಿ ವಲಯ ರವರಿಗೆ ಸಲ್ಲಿಸಲಾಗಿದೆ.*
16. *ಸಹಾಯಕ ಕಂದಾಯ ಅಧಿಕಾರಿಗಳು ಬೊಮ್ಮನಹಳ್ಳಿ ರವರಿಗೆ ಸಲ್ಲಿಸಲಾಗಿದೆ.*
17. *ಆರೋಗ್ಯ ಪರಿವೀಕ್ಷಕರು ಬೊಮ್ಮನಹಳ್ಳಿ ರವರಿಗೆ ಸಲ್ಲಿಸಲಾಗಿದೆ.*
18. *ಕಛೇರಿ ಪ್ರತಿ.*

ಕಾರ್ಯದರ್ಶಿಗಳು ಹಾಗೂ ಸಹಾಯಕ ಅಭಿಯಂತರರು
ವಾರ್ಡ್ ನಂ. 175, ಬೊಮ್ಮನಹಳ್ಳಿ

ಅಧ್ಯಕ್ಷರು ಹಾಗೂ ನೋಡಲ್ ಅಧಿಕಾರಿಗಳು
ವಾರ್ಡ್ ನಂ. 175, ಬೊಮ್ಮನಹಳ್ಳಿ

Scanned with CamScanner